



**ಯು**ವಕನೊಬ್ಬ ಶಿಕ್ಷಣಾರ್ಥಿಯಾಗಿ ಆಶ್ರಮವೊಂದಕ್ಕೆ ಹೋದನು. ಅಲ್ಲಿ ಅತ್ಯಂತ ಕಟ್ಟುನಿಟ್ಟಿನ ಶಿಸ್ತನ್ನು ಪಾಲಿಸಲಾಗುತ್ತಿತ್ತು. ಅಂತಹ ಶಿಸ್ತಿನ ಜೀವನ ಈ ಯುವಕನಿಗೆ ತುಂಬ ಕಠಿಣವೆನಿಸಿತು. ದಿನ ಕಳೆದಂತೆ ಅವನ ಮನಸ್ಸನ್ನು ನಿರಾಸೆ ಕವಿಯತೊಡಗಿತು, ಅವನಿಗೆ ಜೀವನ ನಿರರ್ಥಕವೆನಿಸಿತು.

ಒಂದು ದಿನ ಅವನು ಅತ್ಯಂತ ಹತಾಶ ಮನೋಭಾವದಿಂದ ಆತ್ಮಹತ್ಯೆ ಮಾಡಿಕೊಳ್ಳಲು ನದಿಗೆ ಹೋದನು. ಅವನು ಇನ್ನೇನು ನದಿಗೆ ಹಾರಬೇಕೆಂದಿರುವಾಗ ಮೆಟ್ಟಿಲುಗಳ ಮೇಲೆ ಹಳ್ಳಗಳನ್ನು ನೋಡಿದನು. ಮಹಿಳೆಯರು ತುಂಬಿದ ಕೊಡವನ್ನು ಪ್ರತಿದಿನ ಕಲ್ಲಿನ ಮೆಟ್ಟಿಲುಗಳ ಮೇಲೆ ಇಡುತ್ತಾರೆ, ಕ್ರಮೇಣ ಆ ಜಾಗದಲ್ಲಿ ಹಳ್ಳ ಉಂಟಾಗುತ್ತದೆ.

ಇದನ್ನು ಗಮನಿಸಿದ ಯುವಕನಿಗೆ ಹೊಳೆಯಿತು. ಪ್ರತಿದಿನ ತುಂಬಿದ ಕೊಡವನ್ನು ಇಡುವುದರಿಂದ ಕಠಿಣವಾದ ಕಲ್ಲಿನ ಮೇಲೆಯೇ ಹಳ್ಳ ಉಂಟಾಗಿದೆ ! ನಿರಂತರ ಅಭ್ಯಾಸದಿಂದ ಏನನ್ನು ತಾನೆ ಸಾಧಿಸಲಾಗುವುದಿಲ್ಲ? ಅಭ್ಯಾಸದ ಮಹತ್ವ ಎಷ್ಟೆಂದು ಅವನಿಗೆ ಅರಿವಾಯಿತು. ಅವನ ನಿರಾಸೆ ಮಾಯವಾಗಿ ಹೊಸ ಆಶಾಕಿರಣ ಅವನ ಮನಸ್ಸಿನಲ್ಲಿ ಮೂಡಿತು. ದೃಢ ಸಂಕಲ್ಪದಿಂದ ತಾಳ್ಮೆಗೆಡದೆ ನಿರಂತರ ಅಭ್ಯಾಸ ಮಾಡಬೇಕು.